# ಅಪ್ಪಾ ನಿನಗಾಗಿ...........

ಅಪ್ಪಾ ನೀನು ಎಸ್.ಎಸ್.ಎಲ್.ಸಿ. ಮಕ್ಕಳ ಅಂಕಗಳನ್ನು ಹಿಡಿದು ತಿರುವಿ ತಿರುವಿ ವಿಶ್ಲೇಷಣೆ ಮಾಡುವುದು ನೋಡಿ ಮನಸ್ಸಿಗೆ ಬಹಳ ನೋವಾಗುತ್ತಿದೆ. ಕೆಲವೊಮ್ಮೆ ನನಗೆ ನಾನೇ ಪ್ರಶ್ನಿಸುತ್ತೇನೆ "ಹೀಗೂ ಉಂಟೇ?...." ಅದಕ್ಕಾಗಿ ನನ್ನ ಮನದಲ್ಲಿ ಮೂಡಿದ ಪ್ರಶ್ನೆಗಳನ್ನು ನಿನ್ನಲ್ಲಿ ಹಂಚಿಕೊಳ್ಳುತ್ತಿದ್ದೇನೆ. ಏಕೆಂದರೆ ನಿನ್ನನ್ನು ನಾನು ಪ್ರೀತಿಸುತ್ತೇನೆ.

ನಾನು ಇಂದು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಉತ್ತೀರ್ಣನಾಗಿದ್ದೇನೆ. ಗಣಿತ ಶಿಕ್ಷಕನ ಮಗಳಾಗಿ ಗಣಿತದಲ್ಲಿ 100 ಅಂಕಗಳನ್ನು ಪಡೆದದ್ದು ನಿನಗೆ ಅತೀವ ಸಂತೋಷವನ್ನುಂಟುಮಾಡಿದೆ ಎಂಬುವುದನ್ನೂ ನಾನು ಗಮನಿಸಿದ್ದೇನೆ. ಆದರೆ ನನ್ನನ್ನು ಕಾಡುತ್ತಿರುವ ಕೆಲವು ಅನುಮಾನಗಳಿವೆ. ಅದಕ್ಕೆ ಉತ್ತರಿಸಲು ನಿನ್ನಿಂದ ಸಾಧ್ಯವೇ?......

ಅಪ್ಪ ಎಸ್.ಎಸ್.ಎಲ್.ಸಿ.ಗೆ ಉತ್ತೀರ್ಣಗೊಂಡ ದಿನವೇ ನಾನು ನನ್ನ ಎಲ್ಲಾ ಸಂತೋಷಗಳನ್ನು ಕಳೆದುಕೊಂಡೆ. ಫಲಿತಾಂಶ ಪಟ್ಟಿಯ ಕೆಳಗಡೆ ಬರೆದ ವಾಕ್ಯವು ನನಗೆ ಉತ್ತೀರ್ಣತೆಯ ಯಾವುದೇ ಸವಿಯನ್ನು ಅನುಭವಿಸಲು ಬಿಡಲಿಲ್ಲ. "ಎಸ್.ಎಸ್.ಎಲ್.ಸಿ.ತರಗತಿಗಳು ಮೇ 1ರಿಂದ ಆರಂಭ" ಎಂಬ ಪ್ರಕಟಣೆ ನೋಡಿ ನಾನು ಕಳವಳಗೊಂಡೆ. ಬೇಸಿಗೆ ರಜೆಯು ವಿದ್ಯಾರ್ಥಿಗಳ ಮಾನಸಿಕ ವಿಕಸನೆಗೆ ಅತೀ ಅಗತ್ಯ ಎಂದು ಕೇಳಿದ್ದೆ. ಆದರೆ ಈ ಒಂದು ತಿಂಗಳ ಸಂತೋಷವನ್ನು, ಕಸಿದುಕೊಂಡ ವ್ಯವಸ್ಥೆ ಅದನ್ನು ಮರಳಿ ನನಗೆ ಕೊಡಲು ಸಾಧ್ಯವೇ?..... . ನಷ್ಟವಾದ ನನ್ನ ಒಂದು ತಿಂಗಳ ಮಾನಸಿಕ ನೆಮ್ಮದಿಗೆ ಹೊಣೆಗಾರರು ಯಾರು?.... ಅಪ್ಪ ನೀನು ಇದಕ್ಕೆ ಉತ್ತರಿಸಲಾರೆ ಎಂದು ನನಗೆ ತಿಳಿದಿದೆ. ಪೂರ್ತಿ ವರ್ಷ ಯಾವುದೆ ರಜೆಗಳಿಲ್ಲ. ಆದಿತ್ಯವಾರಗಳಿಲ್ಲ. ಹೀಗೇಕೆ ನಿಮ್ಮ ವ್ಯವಸ್ಥೆ. ನಮ್ಮ ವಿಷಯ ಆಗಿರಲಿ ಈ ಶಿಕ್ಷಕರುಗಳಿಗೆ (ನಿನ್ನ ಸೇರಿ) ಸಂಸಾರವಿಲ್ಲವೇ?. ಬೇರೆ ಇಲಾಖೆಯಲ್ಲಿ 10ಗಂಟೆಗೆ ಹೋದರೂ ಕೇಳುವವರಿಲ್ಲ, ಯಾವುದೇ ಸಮಯದ ಪರಿವೆಯಿಲ್ಲ. ಆದರೆ ನೀವೇಕೆ ಹೀಗೆ?. ನಿನ್ನ ಅಪ್ಪನಿಗೇನು ಬೇಕಾದಷ್ಟು ರಜೆ ಇದೆ ಅಂತ ಹೇಳುವುದನ್ನು ಕೇಳಿದ್ದೇನೆ? ಆದರೆ ನಿನಗೆ ಯಾವಾಗ ರಜೆ ಇದೆ ಅಂತ ನನಗೆ ಗೊತ್ತೇ ಆಗಿಲ್ಲ. ನನಗಾದರೆ ಈ ಒಂದು ವರ್ಷ ಎಸ್.ಎಸ್.ಎಲ್.ಸಿ. ಆದರೆ ನೀನು ನನಗೆ ಬುದ್ಧಿ ಬಂದ ನಂತರದಿಂದ ನೋಡುತ್ತಿದ್ದೇನೆ. ಎಸ್.ಎಸ್.ಎಲ್.ಸಿ. ಫಲಿತಾಂಶ ಮತ್ತು ಶಾಲೆ ಬಿಟ್ಟರೆ ಬೇರೆ ಪ್ರಪಂಚ ಕಂಡಿದ್ದಿಯಾ?....

ಇರಲಿ ಎಸ್.ಎಸ್.ಎಲ್.ಸಿ. ಅಲ್ವೇ?.. ಜೀವನದ ಮಹತ್ವದ ತಿರುವು ಪಡೆಯುವ ವರ್ಷ ಅಂತ ನನ್ನ ಗುರುವರ್ಯರು ನನ್ನ ತಲೆಯಲ್ಲಿ ತುಂಬಿ ಬಿಟ್ಟರು. ನಾನು ಮುಗ್ಧತೆಯಿಂದ ಅದನ್ನು ನಂಬಿದೆ. ಆದರೆ ಮೊದಲ ದಿನದಿಂದಲೇ ನನ್ನ ತಲೆಯಲ್ಲಿ ತುಂಬಿದ್ದು ಪರೀಕ್ಷಾ ಫಲಿತಾಂಶ. ನನ್ನ ಶಿಕ್ಷಕರು ಪ್ರತಿ ಪಾಠ

ಮಾಡುವಾಗಲೂ ಫಲಿತಾಂಶದ ಬಗ್ಗೆ ಹೇಳದ ದಿನಗಳಿಲ್ಲ. ನನಗೆ ಎಸ್.ಎಸ್.ಎಲ್.ಸಿ. ಯಾಕಪ್ಪಾ ಬಂದೆ ಎನ್ನುವಷ್ಟು ಜಿಗುಪ್ಸೆ ಬಂದಿತ್ತು. ಅಪ್ಪ.. ಎಸ್.ಎಸ್.ಎಲ್.ಸಿ. ಆದ ಮಾತ್ರಕ್ಕೆ ಎಲ್ಲಾ ಆಟೋಟಗಳಿಂದ ಮುಕ್ತರಾಗಬೇಕೆ?. ನನ್ನ ಎಸ್.ಎಸ್.ಎಲ್.ಸಿ. ಇಡೀ ವರ್ಷ ಆಟದ ಮೈದಾನ ನೋಡಲಾಗಲಿಲ್ಲ. ನಮಗೆ ಯಾವುದೇ ಸ್ಪರ್ಧೆಗಳಿಲ್ಲ. ಕಾರಣ ನೀವು ಎಸ್.ಎಸ್.ಎಲ್.ಸಿ. ಎಂಬ ಉತ್ತರ. ನನ್ನ ಶಿಕ್ಷಕರುಗಳ ಪರದಾಟ ನೋಡುವಾಗ ಹತ್ತು ಜನ್ಮ ತಾಳಿದರೂ ಶಿಕ್ಷಕನಾಗಲಾರೆ ಎಂಬ ತೀರ್ಮಾನ ಮಾಡಿದ್ದೇನೆ. ಅದರಲ್ಲೂ ಗಣಿತ ಶಿಕ್ಷಕರ ಪಾಡು, ಪೂರ್ವ ಜನ್ಮದ ಪಾಪದ ಫಲವಾಗಿರಬೇಕು. ಬೆಳಿಗ್ಗೆ 8 ಗಂಟೆಯಿಂದ ಸಂಜೆ 5.30 ರ ತನಕ ಅವರ ತೊಳಲಾಟ ನೋಡಿ ಮನವು ಕರಗುತ್ತಿತ್ತು. ನಾನು ಎಸ್.ಎಸ್.ಎಲ್.ಸಿ. ಒಂದೇ ತರಗತಿಯಲ್ಲಿ ಮೂರು ಜನ್ಮಕ್ಕಾಗುವಷ್ಟು ಬರೆದಿದ್ದೇನೆ. ಯಾಕೆಂದರೆ ವ್ಯವಸ್ಥೆಗೆ ಫಲಿತಾಂಶ ಬೇಕಲ್ಲ!!!!. ಅದರಲ್ಲೂ ನನಗೆ ಉತ್ತರವೇ ದೊರಕದ ಒಂದು ಪ್ರಶ್ನೆ ಇದೆ. ನೀವು ಆಂತರಿಕವಾಗಿ ನೀಡಿದ ಅಂಕಗಳನ್ನು ಮುಂದಿನ ಹಂತದಲ್ಲಿ ಯಾರಾದರೂ ಪರಿಗಣಿಸಿದ್ದಾರಾ? ಇಲ್ಲ ತಾನೆ?.. ನಾನು ಕಾಲೇಜಿಗೆ ಪ್ರವೇಶಕ್ಕೆ ಹೋದಾಗ ಅಲ್ಲಿ ಹೇಳಿದ ಒಂದು ವ್ಯಂಗ್ಯ ಮಾತು ಇಡೀ ನಿಮ್ಮ ವ್ಯವಸ್ಥೆಯನ್ನೇ ಅಣಕಿಸುವಂತಿತ್ತು. " ನೋಡಮ್ಮಾ ನಮಗೆ 625ರಲ್ಲಿ ಅಂಕಗಳು ಬೇಡ. 500ರಲ್ಲಿ ಎಷ್ಟು ಬಂದಿದೆ ಅದು ಬೇಕು. 125 ಅಂಕಗಳು ಶಿಕ್ಷಕರೇ ನೀಡುವುದು. ಅದು ಅವರಿಗೆ ಇಷ್ಟ ಬಂದಂತೆ ನೀಡುತ್ತಾರೆ. ನಾವು ಅದನ್ನು ಪರಿಗಣಿಸುವುದಿಲ್ಲ". ಅಪ್ಪಾ ಇದು ನಿನಗೂ ಅನ್ವಯಿಸುತ್ತೆ ಅಲ್ವೇ? ... ಇದಕ್ಕೇ ತಾನೆ ಶಿಕ್ಷಕರು ಹೆಣಗಾಡುತ್ತಿದ್ದದ್ದು. ಅದೆಷ್ಟು ಚಟುವಟಿಕೆಗಳು...ಅಬ್ಬಬ್ಬಾ ಒಮ್ಮೆ ಒಂದು ವರ್ಷ ಮುಗಿದು ಹೋಯಿತ್ತಲ್ಲಾ?... ಇನ್ನು ಪಠ್ಯೇತರ ವಿಷಯದಲ್ಲಿ ನೀವು ನೀಡುವ ಶ್ರೇಣಿಯನ್ನೂ ಮುಂದಿನ ಹಂತದಲ್ಲಿ ಯಾರಾದರೂ ಪರಿಗಣಿಸುತ್ತಾರ? ಖಂಡಿತಾ ಇಲ್ಲಲ್ವಾ? ...

ಅಪ್ಪಾ ಇದು ನನ್ನ ವಿಷಯ. ಈಗ ನಿನ್ನ ವಿಷಯಕ್ಕೆ ಬರುತ್ತೇನೆ. ನನ್ನ ಎಸ್.ಎಸ್.ಎಲ್.ಸಿ. ಒಂದೇ ವರ್ಷಕ್ಕೆ ಮುಗಿಯಿತು. ಆದರೆ ನನ್ನ ಪ್ರಶ್ನೆ ನಿನ್ನ ಎಸ್.ಎಸ್.ಎಲ್.ಸಿ.ಯಾವಾಗ ಮುಗಿಯುತ್ತೆ?. ಇನ್ನೂ ಶಾಲೆ ಆರಂಭವಾಗಲು ಒಂದು ವಾರ ಇರುವಾಗಲೇ ಮುಂದಿನ ವರ್ಷದ ಎಸ್.ಎಸ್.ಎಲ್.ಸಿ ಫಲಿತಾಂಶಕ್ಕೆ ಯೋಜನೆ ತಯಾರಿಸುತ್ತಿಯಲ್ವಾ?.... ಇದೇನಪ್ಪಾ. ನಿನಗೆ ಫಲಿತಾಂಶದ ವಿಷಯ ಬಿಟ್ಟರೆ ಬೇರೆ ಪದಗಳೇ ಗೊತ್ತಿಲ್ವಾ?.. ಒಂದೆಡೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಎಂಬ  ಶೀರ್ಷಿಕೆ. ಹಾಗಂದರೇನು? ಎಸ್.ಎಸ್.ಎಲ್.ಸಿ. ಯಲ್ಲಿ ಶಿಕ್ಷಕರು ನೀಡುವ 125 ಅಂಕಗಳು ಅಲ್ವೇ?. ಅದು ಬಿಟ್ಟರೆ ಹಿಂದಿನ ವ್ಯವಸ್ಥೆಗೂ ಈಗಿನ ವ್ವವಸ್ಥೆಗೂ ಏನಾದರೂ ವ್ಯತ್ಯಾಸ ಇದೆಯೆ?.. ಅಪ್ಪಾ ನೀನೇಕೆ ಮೌನವಾದೆ? ವಯಸ್ಸಿಗೆ ಮೀರಿದ ಪ್ರಶ್ನೆ ಕೇಳಿದೆ ಅಂತನಾ?. ಹೌದಪ್ಪಾ ಕೇಳಲೇ ಬೇಕಲ್ಲಾ. ಏಕೆಂದರೆ ಅಂತಹ ಶಿಕ್ಷಣ ನನಗೆ ಸಿಕ್ಕಿದೆ ಅಲ್ವೇ?

ಅಪ್ಪಾ ಮಧ್ಯವಾರ್ಷಿಕ ಪರೀಕ್ಷೆಯ ಅಂಕಗಳು ಫಲಿತಾಂಶದ ಮೇಲೆ ಯಾವ ಪರಿಣಾಮವೂ ಬೀರುವುದಿಲ್ಲ ಎಂದು ಗೊತ್ತಿದ್ದೂ, ಅದೇಕೆ ಅದೇ ಪರೀಕ್ಷೆಯ ಫಲಿತಾಂಶವನ್ನು ಹಿಡಿದು ಹತ್ತಾರು ಸಲ, ಮತ್ತೆ ಮತ್ತೆ

ಹಲವಾರು ಮಾನದಂಡಗಳಿಂದ ಮಕ್ಕಳನ್ನು ಅಳೆಯಲು ಪ್ರಯತ್ನಿಸುತ್ತಿರುವುದು. ಎಸ್.ಎಸ್.ಎಲ್.ಸಿ. ಮಕ್ಕಳಿಗೆ ಕನಿಷ್ಠ ಶೌಚಾಲಯಕ್ಕೆ ಹೋಗುವ ಅವಕಾಶವೂ ಕೊಡದೆ ಓದಿಸುತ್ತೀರಲ್ಲಾ? ಇದು ಯಾವ ಸಿ.ಸಿ.ಇ.

ಅಪ್ಪಾ ನಿನ್ನಲ್ಲಿ ನನ್ನ ಇನ್ನೊಂದು ಪ್ರಶ್ನೆ ಇದೆ. ನಿಮ್ಮ ಸಿಸಿಇ ವ್ಯವಸ್ಥೆಯಲ್ಲಿ ಪಾಠಗಳು ಫಬ್ರವರಿಗೆ ಮುಗಿಯಬೇಕಲ್ಲ? ಆದರೆ ಅಕ್ಟೋಬರ್ ತಿಂಗಳಲ್ಲಿ ಮುಗಿಸಿದ ಶಾಲೆಗಳಿವೆ ಎಂದು ಹೇಳಿದ್ದಿ ಇದು ನ್ಯಾಯನಾ? ಏಕೆ ಎಂದರೆ ಉತ್ತರ ಫಲಿತಾಂಶ. ಕೊನೆಯ ರೂಪನಾತ್ಮಕ ಪರೀಕ್ಷೆ ಫಬ್ರವರಿ ಅಲ್ವಾ? ಹಾಗಾದರೆ ಪೂರ್ವ ಸಿದ್ಧತಾ ಪರೀಕ್ಷೆ ಜನವರಿಯಲ್ಲಿ ನಡೆಸಿ, ನೂರಾರು ವಿಶ್ಲೇಷಣೆ ಮಾಡುತ್ತೀರಲ್ಲಾ ಇದು ಯಾವ ಕ್ರಮ. ಅಪ್ಪಾ ಒಂದು ಮಾತು ಹೇಳುತ್ತೇನೆ ಫಲಿತಾಂಶಕ್ಕಾಗಿ ಮಕ್ಕಳನ್ನು ಬಲಿಪಶು ಮಾಡಬೇಡಿ. ಅದು ಅದರಷ್ಟಕ್ಕೇ ಬರಲಿ. ಅಪ್ಪ ಇನ್ನೊಂದು ಪ್ರಶ್ನೆ ಮೂಡುತ್ತಿದೆ. ನೀನು ಪೂರ್ತಿ ವರ್ಷ ಪಾಠ ಮಾಡಿ ಪಾಸಾಗದ ವಿದ್ಯಾರ್ಥಿಗಳು, 15–20 ದಿನಗಳ ಒಳಗೆ ನಡೆಯುವ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತಾರಲ್ಲ ಅದ್ಹೇಗೆ?... ನಿಮ್ಮ ಸಹಾಯವಿಲ್ಲದೆ ಅವರು ಪಾಸಾಗಬಲ್ಲರಾದರೆ! ... ನಿಮ್ಮ ಈ ಪರದಾಟ ಏಕೆ ಬೇಕು?...

ಅಪ್ಪಾ ಕೊನೆಯದ್ದಾಗಿ ಒಂದು ಮಾತು... ಯಾರಿಗೂ ಶಿಕ್ಷಕನಾಗು ಎಂಬ ಸಲಹೆ ಎಂದಿಗೂ ನೀಡಬೇಡ. ನನ್ನ ಶಿಕ್ಷಣ ಪೂರ್ತಿಗೊಂಡು, ಒಂದು ಕೆಲಸ ದೊರೆತರೆ ನೀನು ಶಿಕ್ಷಕ ವೃತ್ತಿಯನ್ನು ಬಿಡು. ನಿನ್ನ ಬದುಕಿಗೆ ನಾನು ಆಸರೆಯಾಗುತ್ತೇನೆ. ಅಪ್ಪಾ ಕ್ಷಮಿಸು ಇದು ನಿನ್ನ ಮೇಲಿರುವ ಅತೀವ ಪ್ರೀತಿಯಿಂದ ಹೊರತು ಅಹಂಕಾರದಿಂದ ಅಲ್ಲ. ಅಷ್ಟಕ್ಕೂ ನಾನು ನಿನ್ನ ಮಗಳಲ್ಲವೇ?...

ಇತೀ ನಿನ್ನ ಪ್ರೀತಿಯ ಮಗಳು.....

ಹಮ್ನಾ